# ವಿದ್ಯಾರ್ಥಿಗಳ ಭಾರತೀಯ ಶಿಕ್ಷಣ ಇತಿಹಾಸ

## (1800-1973)

### ಆರನೆಯ ಪರಿಷ್ಕೃತ ಆವೃತ್ತಿ


### ಜೆ.ಪಿ. ನಾಯಕ್

### ಸೈಯದ್ ನೂರುಲ್


**(ಡಿ)** ***ಯೋಜನೆಗಳ ವಿಕೇಂದ್ರೀಕರಣ*****:** ಇತ್ತೀಚೆಗೆ ಯೋಜನೆಗಳನ್ನು ವಿಕೇಂದ್ರೀಕರಿಸುವುದನ್ನು ಕುರಿತು ಒಲವು ಕಂಡುಬರುತ್ತಿದೆ. ಮೇಲೆ ಸೂಚಿಸಿದಂತೆ, ಪ್ರಸ್ತುತ ಸಮಯದಲ್ಲಿ, ಯೋಜನಾ ಮಂಡಳಿಗಳನ್ನು ರಾಜ್ಯಮಟ್ಟದಲ್ಲಿ ರಚಿಸಲಾಗುತ್ತಿದೆ. ಇನ್ನೂ ಇತ್ತೀಚೆಗೆ, ಜಿಲ್ಲಾ ಮಟ್ಟದಲ್ಲಿ ಸಹ ಯೋಜನೆಗಳನ್ನು ಸಿದ್ಧಪಡಿಸುವ ಪ್ರಯತ್ನಗಳು ನಡೆಯುತ್ತಿವೆ. ಇದರ ಸಲುವಾಗಿ, ಜಿಲ್ಲಾಧಿಕಾರಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ, ಅವರಿಗೆ ಅಗತ್ಯವಿರುವ ಯೋಜನಾ ಹಾಗೂ ಆಡಳಿತ ವ್ಯವಸ್ಥೆಯನ್ನು ಒದಗಿಸಲಾಗುತ್ತಿದೆ. ವಿಕೇಂದ್ರಿಕರಣದ ಈ ಒಲವು ಶಿಕ್ಷಣ ಕ್ಷೇತ್ರದಲ್ಲಿಯೂ ಕಂಡುಬರುತ್ತಿದೆ. ಶೈಕ್ಷಣಿಕ ಅಭಿವೃದ್ಧಿ ಯೋಜನೆಗಳು ಈಗ ಜಿಲ್ಲಾ ಮಟ್ಟದಲ್ಲಿ ತಯಾರಾಗುತ್ತಿವೆ. ಹಾಗೂ ಈ ಉದ್ದೇಶಕ್ಕಾಗಿ, ದ ನ್ಯಾಷನಲ್ ಸ್ಟಾಫ್ ಕಾಲೇಜ್ ಫಾರ್ ಎಜುಕೇಷನಲ್ ಪ್ಲಾನರ್ಸ್ ಅಂಡ್ ಅಡ್ಮಿನಿಸ್ಟ್ರೇಟರ್ಸ್ ಸಂಸ್ಥೆಯು (1967 ರಲ್ಲಿ ಯುನೆಸ್ಕೋ ಸಂಸ್ಥೆಯ ಸಹಯೋಗದಲ್ಲಿ ಸ್ಥಾಪಿಸಿದ ಏಷಿಯನ್ ಇನಸ್ಟಿಟ್ಯೂಟ್ ಆಫ್ ಎಜುಕೇಷನ್ ಪ್ಲ್ಯಾ ನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್ ನಿಂದ ರೂಪುಗೊಂಡಿರುವ ಸಂಸ್ಥೆಯಿದು) ಜಿಲ್ಲಾ ಶಿಕ್ಷಣ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಾಂಸ್ಥಿಕ ಯೋಜನೆಗಾಗಿ ಸಹ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಆಯಾ ರಾಜ್ಯಗಳ ಶಿಕ್ಷಣ ತರಬೇತಿ ಸಂಸ್ಥೆ ಹಾಗೂ ಮತ್ತಿತರ ತರಬೇತಿ ಸಂಸ್ಥೆಗಳು ಶಾಲಾ ಮುಖ್ಯಸ್ಥರಿಗೆ ತರಬೇತಿ ನೀಡುವ ಮೂಲಕ ರಾಜ್ಯ ಶಿಕ್ಷಣ ಇಲಾಖೆಗಳು ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿವೆ.

**(ಇ)** ***ಮೌಲ್ಯಮಾಪನ*****:** ಈಗಾಗಲೇ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳ ಮೌಲ್ಯಮಾಪನವು ಯೋಜನೆ ಮತ್ತು ಅನುಷ್ಠಾನ ಸಂಸ್ಥೆಗಳ ಜವಾಬ್ದಾರಿಯಾಗಿತ್ತು, ಅದು ಹಾಗೆಯೇ ಮುಂದುವರಿಯುತ್ತಿದೆ. ಅರ್ಥಾತ್, ಕೇಂದ್ರದಲ್ಲಿ ಯೋಜನಾ ಆಯೋಗ ಮತ್ತು ಶಿಕ್ಷಣ ಸಚಿವಾಲಯ ಹಾಗೂ ರಾಜ್ಯಗಳಲ್ಲಿ ಆಯಾ ರಾಜ್ಯದ ಶಿಕ್ಷಣ ಇಲಾಖೆಗಳಿಗೆ ಮೌಲ್ಯಮಾಪನದ ಜವಾಬ್ದಾರಿಯಿರುತ್ತದೆ. ವಾರ್ಷಿಕ ಯೋಜನಾ ಚರ್ಚೆ ಮತ್ತು ವಾರ್ಷಿಕ ಬಜೆಟ್ ರಚನೆಯಾಗುವ ಸಮಯದಲ್ಲಿ ಈ ಮೌಲ್ಯಮಾಪನಗಳು ನಡೆಯುತ್ತವೆ. ಮಹತ್ತ್ವದ ಯೋಜನೆಗಳ ಪರಿಶೀಲನೆಯನ್ನು ವಿಶೇಷವಾಗಿ ಸಮಿತಿಗಳು ಕೈಗೊಳ್ಳುತ್ತವೆ. ಯೋಜನಾ ಆಯೋಗದಲ್ಲಿ ಯೋಜನಾ ಮೌಲ್ಯಮಾಪನ ಸಂಸ್ಥೆ ಎನ್ನುವ ವಿಭಾಗವಿದೆ. ಮೂಲದಲ್ಲಿ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳ ಮೌಲ್ಯಮಾಪನ ನಡೆಸುವ ಸಲುವಾಗಿ ಸಂರಚಿಸಲಾಗಿದ್ದ ಈ ಸಂಸ್ಥೆಯನ್ನು ಈಗ ಎಲ್ಲ ಯೋಜನಾ ಕಾರ್ಯಕ್ರಮಗಳ ಮೌಲ್ಯಮಾಪನಕ್ಕಾಗಿ ವಿಸ್ತರಿಸಲಾಗಿದೆ. ಆದರೆ, ಇತ್ತೀಚಿನ ಪರಿಶೀಲನೆಯಲ್ಲಿ, ಯೋಜನೆಗಳ ನಿರಂತರ ಹಾಗೂ ಉನ್ನತ ಗುಣಮಟ್ಟವಿರುವ ಮೌಲ್ಯಮಾಪನಕ್ಕೆ ಸಾಕಷ್ಟು ಅವಕಾಶಗಳಿರುವುದನ್ನು ಗಮನಿಸಲಾಗಿದೆ. ಹಾಗಾಗಿ, ಐದನೆಯ

ಯೋಜನೆಯಲ್ಲಿ ಮೌಲ್ಯಮಾಪನ ವ್ಯವಸ್ಥೆಯನ್ನು ಸುಧಾರಿಸಲು ವಿಶೇಷ ಪ್ರಯತ್ನದ ಅಗತ್ಯವಿದೆಯೆನ್ನುವ ಪ್ರಸ್ತಾವವಿದೆ. ಈ ಉದ್ದೇಶಕ್ಕಾಗಿ ಕೇಂದ್ರ ಶಿಕ್ಷಣ ಸಚಿವಾಲಯದಲ್ಲಿ ವಿಶೇಷ ಘಟಕವೊಂದನ್ನು ಸ್ಥಾಪಿಸಬೇಕೆನ್ನುವ ಪ್ರಸ್ತಾವ ಸಹ ಮಾಡಲಾಗಿದೆ.

**ಸಂಪನ್ಮೂಲಗಳು:** ಭಾರತದ ಶೈಕ್ಷಣಿಕ ಅಭಿವೃದ್ಧಿಗೆ ಸಂಪನ್ಮೂಲಗಳ ಕೊರತೆಯೊಂದು ಮಹತ್ತ್ವದ ಅಡಚಣೆಯಾಗಿದೆ. 1947 ರಲ್ಲಿ ಶೈಕ್ಷಣಿಕವಾಗಿ ಕನಿಷ್ಠ ಮಟ್ಟ ತಲಪಿದ್ದ ಭಾರತದಂತಹ ವಿಶಾಲ ದೇಶವು, ಅದರಲ್ಲೂ ಪ್ರಸ್ತುತ ಆರ್ಥಿಕ ಅಭಿವೃದ್ಧಿಯ ಹಂತದಲ್ಲಿ, ಅಗತ್ಯವಿರುವ ಸಂಪನ್ಮೂಲಗಳೆಲ್ಲವನ್ನೂ ಲಭ್ಯಗೊಳಿಸಲು ಸಾಧ್ಯವಿರಲೇ ಇಲ್ಲ. ಹಾಗಾಗಿ, ಪ್ರತಿ ಯೋಜನೆಯಲ್ಲಿಯೂ ಶೈಕ್ಷಣಿಕ ಅಭಿವೃದ್ಧಿಗಾಗಿ ಅತಿಯಾಗಿ ಅಲ್ಲದೇ, ಎಷ್ಟೋ ಅಷ್ಟೆಂದು ಸಲ್ಲಿಸಿರುವ ಬೇಡಿಕೆಯಲ್ಲಿಯೂ ಅರ್ಧದಷ್ಟು ಸಂಪನ್ಮೂಲಗಳು ಮಾತ್ರ ಮಂಜೂರಾಗುವ ಅನುಭವವೇ ನಮಗೆ ಇಲ್ಲಿಯವರೆಗೆ ದಕ್ಕಿರುವುದು. 4ನೇ ಪುಟದಲ್ಲಿರುವ (ಮೂಲದಲ್ಲಿ 480ನೇ ಪುಟದಲ್ಲಿರುವ) ಪಟ್ಟಿಕೆಯಲ್ಲಿ ಕ್ರಮಾನುಗತ ಪಂಚವಾರ್ಷಿಕ ಯೋಜನೆಗಳು ಶಿಕ್ಷಣಕ್ಕೆ ನೀಡಿದ ಸಂಪನ್ಮೂಲಗಳ ವಾಸ್ತವ ವಿವರಗಳನ್ನು ನೋಡಬಹುದು.

ಯೋಜನೆಗಳ ಮೂಲಕ ದೊರಕಿದ ಹಣಕ್ಕೆ ಪೂರಕವಾಗಿ ಸಮುದಾಯದ ಮೂಲಕ ಬೆಂಬಲ ಪಡೆಯುವ ಪ್ರಯತ್ನಗಳಾಗಿವೆ. ಕೆಲವು ಸಂಪದ್ಭರಿತ (ಪಂಜಾಬ್ ಮತ್ತು ಹರಿಯಾಣದಂತಹ) ಸಮೃದ್ಧ ಪ್ರದೇಶಗಳು ಅಥವಾ ಸಾಮಾನ್ಯ ಜನರಲ್ಲಿಯೂ ಶೈಕ್ಷಣಿಕ ಪ್ರಜ್ಞೆ ಮೂಡಿರುವ (ತಮಿಳುನಾಡಿನಂತಹ) ಪ್ರದೇಶಗಳಲ್ಲಿ ಈ ಪ್ರಯತ್ನಗಳಿಗೆ ಒಳ್ಳೆಯ ಪ್ರತಿಕ್ರಿಯೆ ದೊರಕಿದೆ. ಸಾಮಾನ್ಯವಾಗಿ, ಸಮುದಾಯದಿಂದ ಭೂಮಿ, ಕಟ್ಟಡ, ಕೆಲವು ಸಲಕರಣೆಗಳು ಮತ್ತು ಆಹಾರದಂತಹ ಸೇವೆಗಳಿಗೆ ಬೆಂಬಲ ದೊರಕುತ್ತದೆ.

ಪ್ರತಿ ಯೋಜನೆ ಅಂತ್ಯವಾಗುವ ವೇಳೆಗೆ ಶಿಕ್ಷಣದ ಆವರ್ತಕ (recurring) ವೆಚ್ಚವು ಹೆಚ್ಚಾಗಿಹೋಗಿರುತ್ತದೆ. ಹಾಗಾಗಿ ಮುಂದಿನ ಹಂತದ ಅಭಿವೃದ್ಧಿಗೆ ಅಗತ್ಯವಿರುವ ಹೆಚ್ಚುವರಿ ಸಂಪನ್ಮೂಲಗಳ ಲಭ್ಯತೆ ಮತ್ತಷ್ಟು ದುಸ್ತರವಾಗುತ್ತದೆ. ಮೊದಲ ಯೋಜನೆಯಲ್ಲಿ ಶಿಕ್ಷಣಕ್ಕೆ ಒಟ್ಟಾರೆ ಯೋಜನೆಯ ಶೇಕಡ 8.7 ಹಣವನ್ನು ಮೀಸಲಿಡಲಾಗಿತ್ತು. ಎರಡನೆಯ ಯೋಜನೆಯಲ್ಲಿ ಇದು ಶೇಕಡ 6.7 ಕ್ಕೆ ಇಳಿಯಿತು. ಮೂರನೆಯ ಯೋಜನೆಯಲ್ಲಿ ಇದೇ ಮಟ್ಟ ಸ್ಥಾಯಿಯಾಗಿದ್ದು, ಒಟ್ಟಾರೆ ಯೋಜನೆಯ ಶೇಕಡ 6.9 ಶಿಕ್ಷಣಕ್ಕೆ ಮೀಸಲಾಗಿತ್ತು. ನಾಲ್ಕನೆಯ ಯೋಜನೆಯಲ್ಲಿ ಇದು ಪುನಃ ಶೇಕಡಕ್ಕೆ 5.2 ಕ್ಕೆ ಇಳಿಯಿತು ಹಾಗೂ ಐದನೇ ಯೋಜನೆಯಲ್ಲಿ ಕೇವಲ ಶೇಕಡ 4.6

ಆಗಲಿದೆ. ಇದೇ ಸಮಯದಲ್ಲಿ ಒಟ್ಟು ಶೈಕ್ಷಣಿಕ ವೆಚ್ಚವು 1950-51 ರಲ್ಲಿ ರೂ. 144 ಕೋಟಿ ಇದ್ದದ್ದು 1973-74 ರಲ್ಲಿ ರೂ. 1200 ಕೋಟಿಯಾಗಿದೆ. ಶೈಕ್ಷಣಿಕ ವೆಚ್ಚ ಒಂದು ಸಮತಲ ತಲಪಿದೆ ಹಾಗೂ ಶೈಕ್ಷಣಿಕ ಬೆಳವಣಿಗೆಗೆ ಹೆಚ್ಚುವರಿ ಹಣ ಸಿಗುವುದು ಮತ್ತಷ್ಟು ಕಠಿಣವಾಗಲಿದೆ.

ಕ್ರಮಾನುಗತ ಪಂಚವಾರ್ಷಿಕ ಯೋಜನೆಗಳ ಶೈಕ್ಷಣಿಕ ಖರ್ಚು/ವೆಚ್ಚ (1930-1978)

| | ಮೊದಲ ಯೋಜನೆ | ಎರಡನೇ ಯೋಜನೆ | ಮೂರನೇ ಯೋಜನೆ | ವಾರ್ಷಿಕ ಯೋಜನೆ ವರ್ಷಗಳು | ನಾಲ್ಕನೇ ಯೋಜನೆ | ಐದನೇ ಯೋಜನೆ |
|---|---|---|---|---|---|---|
| ಪ್ರಾಥಮಿಕ ಶಿಕ್ಷಣ | 85 | 95 | 178 | 65 | 239 | 743 |
| | (56) | (35) | (30) | (20) | (30) | (43) |
| ಪ್ರೌಢ ಶಿಕ್ಷಣ | 20 | 51 | 103 | 53 | 140 | 241 |
| | (13) | (19) | (18) | (16) | (18) | (14) |
| ವಿಶ್ವವಿದ್ಯಾಲಯ ಶಿಕ್ಷಣ | 14 | 48 | 87 | 77 | 195 | 337 |
| ಶಿಕ್ಷಕ ಶಿಕ್ಷಣ | * | * | 23 | 9 | * | * |
| | | | (4) | (3) | | |
| ವಯಸ್ಕ ಶಿಕ್ಷಣ | 5 | 4 | 2 | 2 | 5 | 35 |
| | (3) | (1) | (-) | (1) | (1) | (2) |
| ಸಾಂಸ್ಕೃತಿಕ ಕಾರ್ಯಕ್ರಮಗಳು | ** | 3 | 7 | 4 | 12 | 35 |
| | | (1) | (1) | (1) | (2) | (2) |
| ಇತರೆ ಶೈಕ್ಷಣಿಕ ಕಾರ್ಯಕ್ರಮಗಳು | 9 | 23 | 64 | 31 | 90 | 171 |
| | (6) | (8) | (11) | (9) | (11) | (10) |
| ಒಟ್ಟು ಸಾಮಾನ್ಯ ಶಿಕ್ಷಣ | 133<br>(87) | 224<br>(82) | 484<br>(79) | 241<br>(75) | 680<br>(87) | 1562<br>(91) |
| ತಂತ್ರಜ್ಞಾನ ಶಿಕ್ಷಣ | 20<br>(13) | 49<br>(18) | 125<br>(21) | 81<br>(25) | 106<br>(13) | 164<br>(9) |
| ಶಿಕ್ಷಣ ಒಟ್ಟು ಮೊತ್ತ | 153<br>(100) | 273<br>(100) | 589<br>(100) | 322<br>(100) | 786<br>(100) | 1726<br>(100) |

ಮೂಲ: 1. ಐದನೇ ಪಂಚ ವಾರ್ಷಿಕ ಯೋಜನೆಯಲ್ಲಿ ಶಿಕ್ಷಣ (1974-79). ಮೊದಲ, ಎರಡನೇ ಹಾಗೂ ಮೂರನೇ ಯೋಜನೆಗಳಲ್ಲಿ ಶಿಕ್ಷಣ ಮತ್ತು ಲೋಕ ಕಲ್ಯಾಣ ಸಚಿವಾಲಯ, 1972.

2. ಐದನೇ ಪಂಚವಾರ್ಷಿಕ ಯೋಜನೆ (1974-79) ಕರಡು, ನಾಲ್ಕು ಮತ್ತು ಐದನೇ ಯೋಜನೆಗಳ ಯೋಜನಾ ಆಯೋಗ.

3. ಕಂಸದೊಳಗಿರುವ ಸಂಖ್ಯೆಗಳು ಒಟ್ಟು ಶೇಕಡ ತೋರಿಸುತ್ತವೆ.

* ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಡಿ ಸೇರಿದೆ. ** ಇತರ ಶೈಕ್ಷಣಿಕ ಕಾರ್ಯಕ್ರಮಗಳ ಅಡಿ ಸೇರಿಕೊಂಡಿದೆ.

**ಸ್ವಾತಂತ್ರ್ಯಾ ನಂತರದ ಅವಧಿಯಲ್ಲಿ ಶಿಕ್ಷಣ: ಒಂದು ಅವಲೋಕನ**: ಸ್ವಾತಂತ್ರ್ಯೋತ್ತರ ಭಾರತದ ಮಹತ್ತರ ಶೈಕ್ಷಣಿಕ ಘಟ್ಟಗಳ ಸ್ಥೂಲ ಸಮೀಕ್ಷೆಯನ್ನು ನಡೆಸಿದ್ದೇವೆ. ನಮ್ಮ ಪ್ರಮುಖ ಸಾಧನೆ ವೈಫಲ್ಯಗಳೇನು ಹಾಗೂ ಶಿಕ್ಷಣದಲ್ಲಿ ಇನ್ನಷ್ಟು ಪ್ರಗತಿ ಹೊಂದಲು ತೆಗೆದುಕೊಳ್ಳಬಹುದಾದ ಮಾರ್ಗಗಳು ಯಾವುವೆಂದು ಪರಿಶೀಲಿಸಬೇಕಾದ ಸಮಯವೀಗ ಬಂದಿದೆ.

(ಅ) ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ: ಈ ಶತಮಾನದ ಆರಂಭಿಕ ವರ್ಷಗಳಲ್ಲಿ, ರಾಷ್ಟ್ರೀಯ ಶಿಕ್ಷಣದ ಪರಿಕಲ್ಪನೆಯು ಸ್ವಾತಂತ್ರ್ಯ ಹೋರಾಟದ ಒಂದು ಉಪ-ಉತ್ಪನ್ನವಾಗಿ ಯಾವ ರೀತಿಯಲ್ಲಿ ಹೊರಹೊಮ್ಮಿತೆಂದು ಹಾಗೂ ಸ್ವಾತಂತ್ರ್ಯ ದೊರಕುವ ಮುಂಚಿನ ಅವಧಿಯಲ್ಲಿ, (ಅಧಿಕೃತ ಶಿಕ್ಷಣ ವ್ಯವಸ್ಥೆಯ ಹೊರಗೆ) ಶೈಕ್ಷಣಿಕ ವ್ಯವಸ್ಥೆಯ

ಪರಿಕಲ್ಪನೆಯ ಸ್ಪಷ್ಟತೆ ಮತ್ತು ಪರಿಶೀಲನೆಗೆ ಪ್ರಾಯೋಗಿಕ ಸಂಸ್ಥೆಗಳನ್ನು ಸ್ಥಾಪಿಸುವ ಅನೇಕ ಪ್ರಯತ್ನಗಳಾಗಿದ್ದನ್ನು ಈ ಹಿಂದೆ ನೋಡಿದ್ದೇವೆ. ಸ್ವಾತಂತ್ರ್ಯದ ಅನಂತರವೂ ಇದೇ ಕಾಳಜಿ ಮುಂದುವರಿಯಿತು. ಯುನಿವರ್ಸಿಟಿ ಎಜುಕೇಷನ್ ಕಮಿಷನ್ (1948-49) ಮತ್ತು ಸೆಕಂಡರಿ ಎಜುಕೆಷನ್ ಕಮಿಷನ್ (1952-53) ತಮ್ಮ ತಮ್ಮ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ ಹೇಗಿರಬೇಕೆನ್ನುವುದರ ಪರಿಭಾಷೆಯನ್ನು ನೀಡಲು ಯತ್ನಿಸಿದವು. ವೈಜ್ಞಾನಿಕ ಸಂಶೋಧನೆ, ತಾಂತ್ರಿಕ, ವೈದ್ಯಕೀಯ, ಕೃಷಿ ಮತ್ತಿತರ ಶಿಕ್ಷಣ ಕ್ಷೇತ್ರಗಳಲ್ಲಿ ಸಹ ಮಹತ್ತ್ವದ ಸಮಿತಿಗಳ ಮೂಲಕ ಇದೇ ರೀತಿಯ ಅನೇಕ ಪ್ರಯತ್ನಗಳಾದವು. ಈ ನಿಟ್ಟಿನಲ್ಲಿ ಶಿಕ್ಷಣ ಸಮಿತಿಯ (1964 -66) ವತಿಯಿಂದ ಬಹುಶಃ ಅತ್ಯಂತ ವ್ಯಾಪಕವಾದ ಮತ್ತು ಬಹಳ ಉತ್ತಮ ಪ್ರಯತ್ನ ನಡೆಯಿತು. ಈ ಸಮಿತಿಯ ಅಭಿಪ್ರಾಯ ಹೀಗಿದೆ - "ಸಾಂಪ್ರದಾಯಿಕ ಹಾಗೂ ಊಳಿಗಮಾನ್ಯ ಸಮಾಜದ ಮಿತಿಗಳಲ್ಲಿ ಸಾಮ್ರಾಜ್ಯಶಾಹಿ ಅಧಿಕಾರದ ಅಗತ್ಯಗಳನ್ನು ಪೂರೈಸುವ ಸಲುವಾಗಿ ವಿನ್ಯಾಸಗೊಳಿಸಿರುವ ಪ್ರಸಕ್ತ ಶಿಕ್ಷಣ ವ್ಯವಸ್ಥೆಯನ್ನು ಆಧುನಿಕ ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಸಮಾಜದ ಉದ್ದೇಶಗಳನ್ನು ಈಡೇರಿಸುವ ವ್ಯವಸ್ಥೆಯನ್ನಾಗಿ ಪರಿವರ್ತಿಸಲು - ಶೈಕ್ಷಣಿಕ ಉದ್ದೇಶಗಳು, ಬೋಧನಾ ವಿಧಾನಗಳು, ಕಾರ್ಯಕ್ರಮಗಳು, ವಿದ್ಯಾರ್ಥಿ ಸಮುದಾಯದ ಗಾತ್ರ ಮತ್ತು ಸಂಯೋಜನೆ, ಶಿಕ್ಷಕರ ಆಯ್ಕೆ ಮತ್ತು ಸಿದ್ಧತೆ ಮತ್ತು ಸಾಂಸ್ಥಿಕ ಸಿದ್ಧತೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳ ಅಗತ್ಯವಿದೆ." ಅನಂತರ ಈ ಸಮಿತಿಯು ಹೊಸ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಚಿತ್ರಣವನ್ನು ರಚಿಸಿ ಅದರ ಅನುಷ್ಠಾನಕ್ಕೆ 20 ವರ್ಷಗಳ ಕಾಲಾವಧಿಯ (1966-86) ಕ್ರಿಯಾ ಯೋಜನೆಯನ್ನು ಸಹ ನೀಡಿತು. ಈ ದೃಷ್ಟಿಕೋನದಿಂದ, ಭಾರತದ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವ ಹಳೆಯ ಅನ್ವೇಷಣೆಯಲ್ಲಿ, ಶಿಕ್ಷಣ ಸಮಿತಿಯ ವರದಿಯನ್ನು ಮಹತ್ತರ ಸಾಧನೆಯೆನ್ನಬಹುದು. ಪರಾಮರ್ಶೆಯನ್ನು ಸುಗಮಗೊಳಿಸಲು ಇದರ ಮುಖ್ಯ ಶಿಫಾರಸ್ಸುಗಳ ಸಾರಾಂಶವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಚಿಂತನೆಯಲ್ಲಿರುವ ಅತ್ಯಂತ ಮುಖ್ಯ ಬದಲಾವಣೆಯನ್ನು ನಾವು ಗಮನಿಸಲೇಬೇಕು. 1947ಕ್ಕೆ ಮೊದಲು, ಪರಕೀಯ ಸರ್ಕಾರ ಆರ್ಥಿಕ ಬೆಂಬಲ ನೀಡಿ ನಿಯಂತ್ರಿಸುತ್ತಿದ್ದ ಅಧಿಕೃತ ವ್ಯವಸ್ಥೆಯ ಹೊರಗೆ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿದ್ದವು. ಸ್ವಾತಂತ್ರ್ಯದ ಅನಂತರ ಹೀಗೆ ಮಾಡುವ ಅಗತ್ಯವಿರಲಿಲ್ಲ. ಹಾಗಾಗಿ, ಹಿಂದಿನ ರಾಷ್ಟ್ರೀಯ ಸಂಸ್ಥೆಗಳು ಸ್ವಾತಂತ್ರ್ಯದ ಅನಂತರದಲ್ಲಿ ಸಾಮಾನ್ಯ ವ್ಯವಸ್ಥೆಯ ಭಾಗವಾದವು ಹಾಗೂ ಇಡೀ ಶಿಕ್ಷಣ ವ್ಯವಸ್ಥೆಯನ್ನು ರಾಷ್ಟ್ರೀಯ ವಿನ್ಯಾಸಕ್ಕೆ ತಕ್ಕಂತೆ ಬದಲಿಸುವ ಪ್ರಯತ್ನಗಳಾದವು. ಈ ಪ್ರಯತ್ನ ಅತ್ಯಂತ ಸಂಕೀರ್ಣ ಹಾಗೂ ಕಷ್ಟಕರವಾಗಿತ್ತು. ಏಕೆಂದರೆ ವ್ಯವಸ್ಥೆಯು

ಈಗಾಗಲೇ ಬೃಹದಾಕಾರವಾಗಿತ್ತು ಹಾಗೂ ಇನ್ನೂ ಬೆಳೆಯುತ್ತಿತ್ತು. ಆದರೆ ಸಮಸ್ಯೆಯ ಪರಿಹಾರಕ್ಕೆ ಬೇರೆ ದಾರಿಯಿರಲಿಲ್ಲ.

ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆಗೆ ಶಿಕ್ಷಣ ಸಮಿತಿಯ ವರದಿ ಅಂತಿಮ ಹೇಳಿಕೆಯೆಂದು ಇಲ್ಲಿ ಸೂಚಿಸುತ್ತಿಲ್ಲ. ವರದಿ ಕ್ರಾಂತಿಕಾರಿಯಾಗಿದ್ದರೂ, ಸಲ್ಲಿಕೆಯಾದ 1966ನೇ ಇಸವಿಯ ಅಗತ್ಯಗಳಿಗೆ ಸಹ ಸ್ಪಂದಿಸುವಷ್ಟು ಕ್ರಾಂತಿಕಾರಿಯಾಗಿ ಇದು ಇರಲಿಲ್ಲ. ಈಗ ಇನ್ನಷ್ಟು ಬದಲಾವಣೆಗಳಾಗಿವೆ ಮತ್ತು ಇದರ ಕ್ರಾಂತಿಕಾರಕತ್ವ ಕೊನೆಗೊಂಡಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಸಮಸ್ಯೆಯನ್ನು ಮತ್ತೊಮ್ಮೆ ನೋಡಬೇಕಾಗಿರುವ ಅಗತ್ಯವಿದೆ. ವೇಗವಾಗಿ ಬದಲಾಗುತ್ತಿರುವ ಆಧುನಿಕ ಜಗತ್ತಿನಲ್ಲಿ ಇದು ಅನಿವಾರ್ಯ; ಬದಲಾಗುತ್ತಿರುವ ಜನರ ಅಗತ್ಯ ಮತ್ತು ಆಕಾಂಕ್ಷೆಗಳಿಗನುಗುಣವಾಗಿ ಶೈಕ್ಷಣಿಕ ಚಿಂತನೆಯು ಅವಿರತವಾಗಿ ಜಾಗೃತವಾಗಿರಲೇಬೇಕು. ಹಾಗಾಗಿ, ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಪರಿಕಲ್ಪಿಸಿಕೊಳ್ಳುವ ಕಾರ್ಯವು ನಿರಂತರವಾದದ್ದು. ಆದಾಗ್ಯೂ, ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಮೂಲ ಪರಿಕಲ್ಪನೆಯಲ್ಲಿ ಸ್ಪಷ್ಟತೆಯಿದೆ ಅಥವಾ ಅಲ್ಪ ಸ್ವಲ್ಪ ಪ್ರಯತ್ನದೊಂದಿಗೆ ಸಂಪೂರ್ಣ ಸ್ಪಷ್ಟತೆ ದೊರಕಬಹುದೆಂದು ಖಂಡಿತವಾಗಿ ವಿಶ್ವಾಸದಿಂದ ಹೇಳಬಹುದು. ಅರ್ಥಾತ್, ಶಿಕ್ಷಣ ವ್ಯವಸ್ಥೆಯ ಪುನರ್‌ನಿರ್ಮಾಣ, ಸುಧಾರಣೆ ಮತ್ತು ವಿಸ್ತರಣೆಗೆ ಅಗತ್ಯವಿರುವ ಜ್ಞಾನವು ಈಗಾಗಲೇ ನಮ್ಮಲ್ಲಿದೆ. ನಮ್ಮ ವಿಚಾರಗಳನ್ನು ಅಭ್ಯಾಸಗಳನ್ನಾಗಿ ಜಾರಿಗೊಳಿಸುವಲ್ಲಿ, ಅನುಷ್ಠಾನಗೊಳಿಸುವಲ್ಲಿ ಸೋತಿರುವುದೇ ನಮ್ಮ ಒಟ್ಟಾರೆ ವೈಫಲ್ಯವೆನ್ನಬಹುದು. ಹಾಗಾಗಿ ಅತಿ ಮುಖ್ಯವಾದ ಈ ಪ್ರಶ್ನೆಗೆ ನಾವು ಉತ್ತರ ಹುಡುಕಿಕೊಳ್ಳಬೇಕಾಗಿದೆ: ನಮಗೆ ಪರಿಚಿತವಾದ ಹಾಗೂ ನಾವು ಒಪ್ಪಿಕೊಂಡಿರುವ ಶೈಕ್ಷಣಿಕ ಕಾರ್ಯಕ್ರಮವನ್ನೇ ಅನುಷ್ಠಾನಗೊಳಿಸಲು ನಮಗೇಕೆ ಸಾಧ್ಯವಾಗಿಲ್ಲ? ಈ ಪ್ರಶ್ನೆಗೆ ಸರಿಯಾದ ಉತ್ತರ ದೊರಕಿದರೆ, ಬಹಳ ಬೇಗ ಒಟ್ಟಾರೆ ಶೈಕ್ಷಣಿಕ ದೃಶ್ಯವೇ ಬದಲಾಗುವುದು.

(ಆ) ರಾಷ್ಟ್ರೀಯ ಅಭಿವೃದ್ಧಿಗೆ ಪ್ರಬಲ ಸಾಧನವಾಗಿ ಶಿಕ್ಷಣ: ಒಂದು ಜನಾಂಗವಾಗಿ ನಮಗೆ ಶಿಕ್ಷಣವನ್ನು ಕುರಿತು ಗೌರವ, ಆದರ ಮತ್ತು ಒಲವಿದೆ. ನಮ್ಮ ಸನಾತನ ಪರಂಪರೆಯಲ್ಲಿ ಶಿಕ್ಷಣವು ಸ್ವ-ಅರಿವು ಪಡೆಯುವ ಮುಖ್ಯ ಸಾಧನವೆನ್ನುವ ಭಾವನೆಯಿತ್ತು. ಈ ನಂಬಿಕೆಗೆ ಆಧುನಿಕ ಕಾಲದಲ್ಲಿ ಇನ್ನೊಂದು ಆಯಾಮವನ್ನು ಸೇರಿಸಿದ್ದೇವೆ: ಸ್ವ-ಅರಿವಿಗೆ ಮಾತ್ರವಲ್ಲ, ರಾಷ್ಟ್ರೀಯ ಅಭಿವೃದ್ಧಿಗೆ ಸಹ ಶಿಕ್ಷಣವು ಅತ್ಯಂತ ಪ್ರಬಲ ಸಾಧನವೆಂದು ನಾವು ಭಾವಿಸಿದ್ದೇವೆ. ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಈ ನಂಬಿಕೆಯಿಂದ

ಪ್ರೇರಣೆ ದೊರಕಿತ್ತು; ಸ್ವಾತಂತ್ರ್ಯದ ಅನಂತರ ಸಹ ಈ ನಂಬಿಕೆಯೇ ನಮಗೆ ಪ್ರೇರಣೆ ನೀಡುತ್ತಿದೆ. ಶಿಕ್ಷಣ ಸಮಿತಿಯು ಗಮನಿಸಿದಂತೆ "ಭಾರತದ ಭಾಗ್ಯವೀಗ ಶಾಲಾ ವರ್ಗಕೋಣೆಗಳಲ್ಲಿ ರೂಪುಗೊಳ್ಳುತ್ತಿದೆ."

ಆದಾಗ್ಯೂ, ಈ ನಂಬಿಕೆಯನ್ನು ಸ್ವಲ್ಪ ಮಟ್ಟಿಗೆ ಮಾರ್ಪಡಿಸಿಕೊಳ್ಳಬೇಕೆಂದು ಅನುಭವ ತಿಳಿಸಿಕೊಟ್ಟಿದೆ. ಶಿಕ್ಷಣವನ್ನು ಎರಡು ರೀತಿಯಲ್ಲಿ ಕಾರ್ಯಗತಗೊಳಿಸುವ ಸಾಧ್ಯತೆಯಿದೆ: (೧) ಯಥಾಸ್ಥಿತಿಯನ್ನು ಪ್ರಸ್ತುತ ಕಾಲಕ್ಕೆ ಅನುಗುಣವಾಗಿ ಉಳಿಸಿಕೊಳ್ಳಬೇಕೆನ್ನುವ ಉದ್ದೇಶದಿಂದ ಅಂಚಿನಲ್ಲಿ ಕೆಲವೇ ಬದಲಾವಣೆಗಳನ್ನು ಮಾಡಿಕೊಂಡು ಯಥಾಸ್ಥಿತಿಯನ್ನು ಬಲಪಡಿಸಿ ಮುಂದುವರಿಸುವುದು (೨) ರಾಷ್ಟ್ರೀಯ ಅಗತ್ಯ ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಸೃಜಿಸುವುದು. ಸರ್ಕಾರವು ಆರ್ಥಿಕ ನೆರವನ್ನು ಒದಗಿಸಿ ನಿಯಂತ್ರಿಸುತ್ತಿರುವ ಎಲ್ಲ ಸಮಾಜಗಳ ಶಿಕ್ಷಣ ವ್ಯವಸ್ಥೆಗಳಲ್ಲಿ ಆಡಳಿತ ವರ್ಗದವರ ಹಿತಾಸಕ್ತಿಯ ಸಂರಕ್ಷಣೆ ಹಾಗೂ ಅಭಿವೃದ್ಧಿಯ ಪರ ಒಲವು ಕಂಡುಬರುತ್ತದೆ. ಆಡಳಿತ ವರ್ಗದವರ ಒಟ್ಟಾರೆ ಹಿತಾಸಕ್ತಿಯ ಮೇರೆಗೆ ವ್ಯವಸ್ಥೆಯ ಅಂಚಿನಲ್ಲಿ ಬದಲಾವಣೆ ಹಾಗೂ ಹೊಂದಾಣಿಕೆಗಳನ್ನು ಮಾಡಲಾಗುತ್ತದೆ. ಭಾರತದಲ್ಲಿಯೂ ಇದೇ ವಿದ್ಯಮಾನವನ್ನು ಕಾಣಬಹುದು. ಬ್ರಿಟಿಷ್ ಆಳ್ವಿಕೆಯ ಶಿಕ್ಷಣ ಪದ್ಧತಿಯು ಈ ವರ್ಗದವರ ಸಲುವಾಗಿಯೇ ವಿನ್ಯಾಸಗೊಂಡಿತ್ತು. ಬ್ರಿಟಿಷರ ಆಳ್ವಿಕೆ ಅಂತ್ಯವಾದಾಗ, ಆಡಳಿತವು ಇದೇ ವರ್ಗದವರ ಕೈವಶವಾಯಿತು. ನಗರದ ಮೇಲ್ವರ್ಗ ಮತ್ತು ಮಧ್ಯಮ ವರ್ಗ, ಶ್ರೀಮಂತ ರೈತಾಪಿ ವರ್ಗ ಮತ್ತು ಗ್ರಾಮ ಸಮುದಾಯದ ಶ್ರೀಮಂತರಿಗೆ ಆಡಳಿತ ದೊರೆಯಿತು. ಹಾಗಾಗಿ, ನಮ್ಮ ಶಿಕ್ಷಣ ವ್ಯವಸ್ಥೆಯು ಈ ವರ್ಗದವರ ಹಿತಾಸಕ್ತಿಯ ಪರ ಸೇವೆ ಸಲ್ಲಿಸುತ್ತಿದೆ; ಆದ್ದರಿಂದಲೇ ಪ್ರೌಢ ಮತ್ತು ಉನ್ನತ ಶಿಕ್ಷಣ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ಮತ್ತು ಪ್ರಾಶಸ್ತ್ಯ ಇಲ್ಲಿಯವರೆಗೂ ದೊರಕುತ್ತಲೇ ಇದೆ. ಇದೇ ಕಾರಣದಿಂದ ನಮ್ಮ ಶಿಕ್ಷಣ ವ್ಯವಸ್ಥೆಯು ಜನಸಾಮಾನ್ಯರ ಹಿತಾಸಕ್ತಿಗೆ ಸೇವೆ ಸಲ್ಲಿಸುವ ಪರಿಸ್ಥಿತಿಯಲ್ಲಿಲ್ಲ ಹಾಗೂ ತಾಂತ್ರಿಕ ಪ್ರಭುತ್ವಕ್ಕೆ (ಸಾಮಾನ್ಯ ಜನತೆಗಾಗಿ, ಅವರ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಜ್ಞಾನ ನೀಡುವುದಕ್ಕೆ), ಸಾಮಾನ್ಯ ಜನರ ನಿರಕ್ಷರತೆಯನ್ನು ನೀಗುವುದಕ್ಕೆ ಮತ್ತು 6 ರಿಂದ 14 ವರ್ಷದ ಮಕ್ಕಳಿಗೆ ಸಾರ್ವತ್ರಿಕ ಮತ್ತು ಕಡ್ಡಾಯ ಶಿಕ್ಷಣ ನೀಡುವುದಕ್ಕೆ ಸಾಕಷ್ಟು ಗಮನ ಮತ್ತು ಸಂಪನ್ಮೂಲಗಳು ದೊರಕುತ್ತಿಲ್ಲ.

ಈ ಅನುಭವದಲ್ಲಿ ಸ್ಪಷ್ಟವಾದ ನೀತಿಪಾಠವಿದೆ: ಶಿಕ್ಷಣ ಕ್ಷೇತ್ರದ ಒಳಗಿನಿಂದಾಗುತ್ತಿರುವ ಸುಧಾರಣೆಯ ಪ್ರಯತ್ನಗಳು ಸಫಲವಾಗುತ್ತವೆ ಎನ್ನುವ ಭರವಸೆಯಿಲ್ಲ. ಅದೇ ರೀತಿ, ಸಮಾಜದ ಮಹತ್ತರ ಸಂರಚನಾ ಬದಲಾವಣೆಗಳಿಗಾಗಿ ನಡೆಯುವ ಪ್ರಯತ್ನಗಳು ಶಿಕ್ಷಣದ ಸಹಾಯವಿಲ್ಲದೆ ಸಫಲವಾಗುವುದಿಲ್ಲ. ಅಸಮಾನತೆ

ಮತ್ತು ಅನೇಕ ಕಟ್ಟುಪಾಡುಗಳಿರುವ ಸಾಮಾಜಿಕ ಸಂರಚನೆಯ ಬದಲಿಗೆ ನ್ಯಾಯ, ಸಮಾನತೆ, ಅನಧೀನತೆ, ವ್ಯಕ್ತಿ ಗೌರವ ಮತ್ತು ಸಾಮಾಜಿಕ ಸಂಚಲನೆಗೆ ಸಂಪೂರ್ಣ ಅವಕಾಶಗಳನ್ನು ಕಲ್ಪಿಸಿಕೊಡುವಂತಹ ಸಮಾಜವನ್ನು ಕಟ್ಟುವ ಜೊತೆಯಲ್ಲಿಯೇ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಮೂಲಭೂತವಾಗಿ ಬದಲಾಯಿಸಿ ರಾಷ್ಟ್ರೀಯ ಅಗತ್ಯ ಮತ್ತು ಆಕಾಂಕ್ಷೆಗಳನ್ನು ಪೂರೈಸುವಂತಹ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸುವ ರಾಜಕೀಯ ಮತ್ತು ಆರ್ಥಿಕ ದೃಢಪ್ರಯತ್ನ ನಮ್ಮ ಇಂದಿನ ಈ ಕ್ಷಣದ ಅಗತ್ಯವಾಗಿದೆ. ಶಿಕ್ಷಣ ವ್ಯವಸ್ಥೆಯನ್ನು ಪುನರ್‌ನಿರ್ಮಿಸುವ ಪ್ರಯತ್ನಗಳಲ್ಲಿ ನಾವು ವಿಫಲರಾಗಿರುವುದೇಕೆಂದರೆ ಆ ಪ್ರಯತ್ನಗಳೊಟ್ಟಿಗೆ ಸಾಮಾಜಿಕ ಸಂರಚನೆಯನ್ನು ಬದಲಾಯಿಸುವಂತಹ ರಾಜಕೀಯ ಮತ್ತು ಆರ್ಥಿಕ ಪ್ರಯತ್ನಗಳಾಗುತ್ತಿಲ್ಲ. ಶೈಕ್ಷಣಿಕ ಪುನರ್‌ನಿರ್ಮಾಣದ ಜೊತೆಯಲ್ಲಿ ಈ ಪ್ರಯತ್ನಗಳಿಗೆ ಬೆಂಬಲ ನೀಡಿ ಅವುಗಳಿಗೆ ಒತ್ತು ನೀಡಬೇಕಾದ ಕಾಲವೀಗ ಬಂದಿದೆ.

(ಇ) ಮೂಲ ಆದ್ಯತೆಗಳು: ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮೂಲ ಆದ್ಯತೆಗಳಿಗೆ ಬದ್ಧರಾಗಿರಲು ನಮಗೆ ಸಾಧ್ಯವಾಗಿಲ್ಲವೆಂದು ಒತ್ತಿ ಹೇಳಬೇಕಾಗಿದೆ. ನಮ್ಮ ಅಭಿಲಾಷೆಗೆ ತಕ್ಕಂತಹ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರಚಿಸಲು ಸಾಧ್ಯವಾಗದಿರುವುದಕ್ಕೆ ಇದೊಂದು ಮುಖ್ಯ ಕಾರಣವೆನ್ನಬಹುದು. ಸಂವಿಧಾನದ ಪೀಠಿಕೆಯಲ್ಲಿ ಕಲ್ಪಿತವಾದ ನವ ಸಮಾಜದ ರಚನೆಗೆ ಸಹಾಯಕವಾಗುವಂತೆ ಹಾಗೂ ಜನರ ಅಗತ್ಯ ಆಕಾಂಕ್ಷೆಗಳಿಗೆ ಸ್ಪಂದಿಸುವಂತೆ ಶೈಕ್ಷಣಿಕ ವ್ಯವಸ್ಥೆಯನ್ನು ಬದಲಾಯಿಸುವುದೇ ದೇಶದ ಮುಂದಿರುವ ಅತ್ಯಂತ ಮಹತ್ತ್ವದ ಕಾರ್ಯವೆಂದು ಶಿಕ್ಷಣ ಸಮಿತಿಯು ಹೇಳಿತ್ತು. 1947 ರಲ್ಲಿ ಒಟ್ಟಾರೆ ಶಿಕ್ಷಣ ವ್ಯವಸ್ಥೆಯು ಚಿಕ್ಕದಾಗಿತ್ತು, ಹಾಗೂ ಈಗಿರುವಂತಹ ಒತ್ತಡ ಮತ್ತು ವಿಭೇದಗಳು (stresses and strains) ಇರಲಿಲ್ಲ. ಹಾಗಾಗಿ, ಆ ಸಮಯದಲ್ಲಿ ಶಿಕ್ಷಣ ವ್ಯವಸ್ಥೆಯ ಬದಲಾವಣೆ ಸುಲಭಸಾಧ್ಯವಾಗಿರುತ್ತಿತ್ತು. ಆದರೆ ಆಗ ಬದಲಾವಣೆಗಳಾಗಲಿಲ್ಲ. ಬ್ರಿಟಿಷರಿಂದ ಬಳುವಳಿ ಪಡೆದ ಹಳೆಯ ಅನುಪಯುಕ್ತ ಶಿಕ್ಷಣ ವ್ಯವಸ್ಥೆಯನ್ನು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅಲ್ಪ ಸ್ವಲ್ಪ ಮಾರ್ಪಾಡುಗಳೊಂದಿಗೆ ದಿಕ್ಕು-ದೆಸೆಯಿಲ್ಲದಂತೆ ವಿಸ್ತಾರವಾಗಲು ಅನುಮತಿ ನೀಡಿರುವುದನ್ನು ಕಂಡಿದ್ದೇವೆ. ಈಗ ಸಮಸ್ಯೆಯು ಉಲ್ಬಣಗೊಂಡು ಅನೇಕ ಪಟ್ಟು ಹೆಚ್ಚು ಸಂಕೀರ್ಣ ಮತ್ತು ಕ್ಲಿಷ್ಟವಾಗಿದೆ. ಇನ್ನೂ ಹೆಚ್ಚು ಸಮಯ ಇದು ಹೀಗೆಯೇ ಮುಂದುವರಿದರೆ, ಪ್ರಸ್ತುತ ವ್ಯವಸ್ಥೆಯು ಇನ್ನಷ್ಟು ಬೆಳೆಯುತ್ತದೆ ಮತ್ತು ಇನ್ನಷ್ಟು ಒತ್ತಡ ಮತ್ತು ವಿಭೇದಕ್ಕೊಳಗಾಗುತ್ತದೆ. ಅರ್ಥಾತ್, ಸಮಯ ಕಳೆದಂತೆ ಶಿಕ್ಷಣ ವ್ಯವಸ್ಥೆಯ ಬದಲಾವಣೆ ಮತ್ತಷ್ಟು ಕಠಿಣವಾಗುತ್ತದೆ. ಆದ್ದರಿಂದ ಶಿಕ್ಷಣ ವ್ಯವಸ್ಥೆಯನ್ನು ಬದಲಾಯಿಸುವ ನಮ್ಮ ಪ್ರಯತ್ನಗಳ ಕಡೆಗೆ ಗಮನ

ಕೇಂದ್ರೀಕರಿಸುವುದು ಅತ್ಯಗತ್ಯವಾಗಿದೆ. ಇದು ಅತ್ಯಂತ ಪ್ರಮುಖ ಆದ್ಯತೆಯಾಗಬೇಕು ಹಾಗೂ ಶೀಘ್ರವಾಗಿ ಮಾಡಿದಷ್ಟೂ ಉತ್ತಮ.

ಶೈಕ್ಷಣಿಕ ಪುನರ್‌ನಿರ್ಮಾಣದಲ್ಲಿ ಗುಣಮಟ್ಟದ ಸುಧಾರಣೆ ಎರಡನೆಯ ಆದ್ಯತೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಶೈಕ್ಷಣಿಕ ಗುಣಮಟ್ಟವು ಕುಸಿಯುತ್ತಿದೆ ಎನ್ನುವ ನಿರಾಶಾವಾದದ ದೃಷ್ಟಿಗೆ ಸಮರ್ಥನೆಯಿಲ್ಲ. ಅನೇಕ ಕ್ಷೇತ್ರಗಳಲ್ಲಿ ಹಾಗೂ ಅನೇಕ ವಿಷಯಗಳ ಬೋಧನೆಯಲ್ಲಿ, ವಿಶೇಷವಾಗಿ ವಿಜ್ಞಾನ ಮತ್ತು ವೃತ್ತಿಪರ ಬೋಧನೆಯಲ್ಲಿ ಗಮನಾರ್ಹ ಬೆಳವಣಿಗೆಗಳಾಗಿರುವುದನ್ನು ಒಪ್ಪಲೇಬೇಕು. ಇದಕ್ಕಿಂತ ಮಹತ್ತ್ವದ ವಿಷಯವೇನೆಂದರೆ, ಒಳ್ಳೆಯ ಸಂಸ್ಥೆಗಳ ಹಾಗೂ ವಿದ್ಯಾರ್ಥಿಗಳ ಪರಿಮಾಣ ಹಾಗೂ ಗುಣಮಟ್ಟವು ಹಿಂದಿಗಿಂತ ಹೆಚ್ಚು ಎನ್ನಲಾಗದಿದ್ದರೂ ಹಿಂದಿನ ಅಥವಾ ಎಂದೆಂದಿನ ಮಟ್ಟದಲ್ಲಿ ಇದೆಯೆನ್ನುವುದರಲ್ಲಿ ಸಂಶಯವಿಲ್ಲ. ಇದೇ ಸಮಯದಲ್ಲಿ, ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನಮ್ಮ ಕಾರ್ಯಸಾಧನೆ ಅಷ್ಟೇನೂ ಇಲ್ಲವೆನ್ನುವುದು ಸಹ ಸ್ಪಷ್ಟವಾಗಿದೆ. ಕಳಪೆ ಗುಣಮಟ್ಟದ ಸಂಸ್ಥೆ ಹಾಗೂ ಕನಿಷ್ಠ ಸಾಧನೆ ಗಳಿಸುತ್ತಿರುವ ವಿದ್ಯಾರ್ಥಿಗಳ ಹೆಚ್ಚಳ ಗಗನಕ್ಕೇರುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಇಲ್ಲಿ ಕಂಡಿರುವ ವೈಫಲ್ಯವು ಶೈಕ್ಷಣಿಕ ವ್ಯವಸ್ಥೆಯನ್ನು ಬದಲಾಯಿಸುವ ವೈಫಲ್ಯದ ಹಿಂದಿನ ಸ್ಥಾನದಲ್ಲಿಯೇ ಇದೆ.

**ಗುಣಮಟ್ಟವನ್ನು ಹೆಚ್ಚಿಸುವುದರಲ್ಲಿ ನಾವೇಕೆ ವಿಫಲರಾಗಿದ್ದೇವೆ?** ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಬಂಡವಾಳದ ಅಗತ್ಯವಿರುವುದರಿಂದ ಈ ವಿಷಯದಲ್ಲಿ 'ಹಣ'ದ ಪ್ರಸ್ತಾವ ಬರುವುದರಲ್ಲಿ ಸಂಶಯವೇ ಇಲ್ಲ. ಆದರೆ ತುಲನಾತ್ಮಕವಾಗಿ ನೋಡಿದರೆ ಗುಣಮಟ್ಟದ ಸುಧಾರಣೆಗೆ ತಗಲುವ ವೆಚ್ಚ ಬಹಳ ಹೆಚ್ಚಿರುವುದಿಲ್ಲ ಹಾಗೂ ಕ್ರಮಾನುಗತ ಎಲ್ಲ ಪಂಚವಾರ್ಷಿಕ ಯೋಜನೆಗಳ ಶಿಕ್ಷಣದ ಹಂಚಿಕೆಯಲ್ಲಿಯೇ ಇದಕ್ಕಾಗಿ ಹಣವನ್ನು ಹೊಂದಿಸಬಹುದಿತ್ತು. ಹಾಗಾಗಿ ನಮ್ಮ ವೈಫಲ್ಯಕ್ಕೆ ಹಣವೇ ಮಹತ್ತ್ವದ ಕಾರಣವಲ್ಲ. ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಹಣಕ್ಕಿಂತ ಹೆಚ್ಚಾಗಿ ಮಾನವ ಪ್ರಯತ್ನದ ಆವಶ್ಯಕತೆಯಿರುತ್ತದೆ; ಸಂಪನ್ಮೂಲಗಳ ಕೊರತೆಗಿಂತ ಮೇಲಾಗಿ ಇದಕ್ಕೆ ಅನಿವಾರ್ಯವಾದ ಮಾನವ ಪ್ರಯತ್ನದಲ್ಲಿ ಸೋತಿರುವುದರಿಂದ ಗುಣಮಟ್ಟ ಹೆಚ್ಚಿಸುವ ನಮ್ಮ ಪ್ರಯತ್ನಗಳು ವಿಫಲವಾಗಿವೆ. ಕಟ್ಟಕಡೆಯದಾಗಿ, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಆಡಳಿತ ವರ್ಗಕ್ಕೆ ಸತ್ಯ ಮತ್ತು ಉತ್ಕೃಷ್ಟತೆಯನ್ನು ಕುರಿತ ಶ್ರದ್ಧೆ, ತಮ್ಮ ಸುಪರ್ದಿನಲ್ಲಿರುವ ವಿದ್ಯಾರ್ಥಿಗಳ ಹಿತಾಸಕ್ತಿಯ ಬಗ್ಗೆ ಇವರಿಗಿರುವ ತಾದಾತ್ಮ್ಯ ಭಾವನೆಯ ಮೇಲೆ ಶಿಕ್ಷಣದ ಗುಣಮಟ್ಟವು ಅವಲಂಬಿತವಾಗಿರುತ್ತದೆ.

ಕಾರಣಾಂತರಗಳಿಂದ ಶೈಕ್ಷಣಿಕ ಯೋಜನೆ ಮತ್ತು ಅಭಿವೃದ್ಧಿಯಲ್ಲಿ ಶಿಕ್ಷಕರನ್ನು ಆಳವಾಗಿ ತೊಡಗಿಸಲು ಸಾಕಷ್ಟು ಸಂಖ್ಯೆಯಲ್ಲಿ ಒಳ್ಳೆಯ ಶಿಕ್ಷಕರು ಸಿಗುತ್ತಿಲ್ಲ ಹಾಗೂ ಬದ್ಧತೆ ಮತ್ತು ಆದರ್ಶದೊಂದಿಗೆ ಪರಿಶ್ರಮಿಸುವಂತಹ ವಾತಾವರಣವನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಇದರ ಹೊರತಾಗಿ ಯಾವುದೇ ಕಾರ್ಯಕ್ರಮದಲ್ಲಿ ಗುಣಮಟ್ಟ ಹೆಚ್ಚಾಗುವ ಸಾಧ್ಯತೆಯಿಲ್ಲ. ಈ ಮುಖ್ಯವಾದ ದುರ್ಬಲತೆಯನ್ನು ನೀಗಿಸಿಕೊಂಡರೆ ಮಾತ್ರ ತಕ್ಕಷ್ಟು ಗುಣಮಟ್ಟವಿರುವ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರಚಿಸಲು ಸಾಧ್ಯವಾಗುತ್ತದೆ.

**ಸೌಕರ್ಯಗಳ ವಿಸ್ತರಣೆ ಮೂರನೆಯ ಆದ್ಯತೆ.** ಇದು ಅಮುಖ್ಯವಲ್ಲ ಆದರೆ ಶೈಕ್ಷಣಿಕ ವ್ಯವಸ್ಥೆಯ ಬದಲಾವಣೆ ಅಥವಾ ಇದರ ಗುಣಮಟ್ಟವನ್ನು ಹೆಚ್ಚಿಸುವುದಕ್ಕಿಂತ ಹೆಚ್ಚಿನ ಆದ್ಯತೆ ಇದಕ್ಕೆ ಸಲ್ಲಬಾರದು. ಅಗತ್ಯವಿರುವಷ್ಟು ಹಣ ಲಭ್ಯವಿದ್ದರೆ ಕಾರ್ಯಕ್ರಮಗಳನ್ನು ವಿಸ್ತರಿಸಿ ಅನುಷ್ಠಾನಗೊಳಿಸುವುದು ಸುಲಭಸಾಧ್ಯವೆನ್ನಬಹುದು. ಆದರೆ ಇಲ್ಲಿಯೂ ಸಹ ಸವಾಲು ಕವಲೊಡೆದು ಎರಡಾಗುತ್ತದೆ. ಪ್ರಾಥಮಿಕ ಹಂತದಲ್ಲಿ ವಿಸ್ತರಣೆಯೇ ಅಂತಿಮ ಉದ್ದೇಶ. ಆದರೆ ಸಾರ್ವತ್ರಿಕ ದಾಖಲಾತಿ ಮತ್ತು ಉಳಿಯುವಿಕೆಯನ್ನು ಸಾಧಿಸುವುದು ಬಹಳ ಕಷ್ಟ ಹಾಗೂ ಈ ವಿಷಯಗಳಲ್ಲಿಯೂ, ಗುಣಮಟ್ಟದ ಹೆಚ್ಚಳದ ಕಾರ್ಯಕ್ರಮಗಳಂತೆಯೇ ಮಾನವ ಪ್ರಯತ್ನ ಮಹತ್ತ್ವದ ಅಂಶವಾಗಿರುತ್ತದೆ. ಇನ್ನೊಂದೆಡೆ, ಪ್ರೌಢ ಮತ್ತು ವಿಶ್ವವಿದ್ಯಾಲಯದ ಹಂತದಲ್ಲಾಗುತ್ತಿರುವ ಮಿತಿಮೀರಿದ ಹಾಗೂ ಪೂರ್ವಯೋಜಿತವಲ್ಲದ ವಿಸ್ತರಣೆಯನ್ನು ನಿಯಂತ್ರಿಸಬೇಕಾದ ತುರ್ತು ಅಗತ್ಯವಿದೆ. ಇದು ಸಹ ಅತ್ಯಂತ ಕ್ಲಿಷ್ಟವಾದ ಸಮಸ್ಯೆ. ಹಿಂದಿನ ವೃತ್ತಾಂತದಿಂದ, ನಾವೂ ಎರಡೂ ದಿಕ್ಕಿನಲ್ಲಿ ವಿಫಲರಾಗಿರುವುದು ಕಂಡುಬರುತ್ತಿದೆ. ಪ್ರಾಥಮಿಕ ಹಂತದಲ್ಲಿ ಅಗತ್ಯ ಮಟ್ಟದ ವಿಸ್ತರಣೆ ಸಾಧ್ಯವಾಗಿಲ್ಲ, ಪ್ರೌಢ ಮತ್ತು ವಿಶ್ವವಿದ್ಯಾಲಯದ ಹಂತದಲ್ಲಿನ ನಾಗಾಲೋಟದ ವಿಸ್ತರಣೆಯನ್ನು ನಿಯಂತ್ರಿಸಲಾಗಿಲ್ಲ. ಮುಂಬರುವ ವರ್ಷಗಳಲ್ಲಿ ಇದರ ಕಡೆ ವಿಶೇಷ ಗಮನ ಹರಿಸುವ ಅಗತ್ಯವಿದೆ.

(ಈ) *ಬಂಡವಾಳ ಹೂಡುವಿಕೆಗೆ ಅತೀ ಹೆಚ್ಚಿನ ಪ್ರಾಮುಖ್ಯ:* ಸ್ವಾತಂತ್ರ್ಯಾನಂತರದ ಅವಧಿಯ ಪುನರ್‌ನಿರ್ಮಾಣದ ಪ್ರಯತ್ನಗಳಲ್ಲಿ ನಮ್ಮ ಶೈಕ್ಷಣಿಕ ಯೋಜನೆಗಳಲ್ಲಿ ಕಂಡುಬರುವ ಬಂಡವಾಳ ಹೂಡುವಿಕೆ ಅಥವಾ 'ವೆಚ್ಚ-ನಿಲವು' (expenditure-orientation) ಮತ್ತೊಂದು ಪ್ರಮುಖ ದುರ್ಬಲತೆ. ಹಣವು ಸರಿಪಡಿಸಲಾರದ ಯಾವುದೇ ನ್ಯೂನತೆಗಳು ಶಿಕ್ಷಣ ಕ್ಷೇತ್ರದಲ್ಲಿಲ್ಲ ಎಂಬ ಮುಗ್ಧ ನಂಬಿಕೆಯೇ ಇದಕ್ಕೆ ಆಧಾರ. ಖಂಡಿತವಾಗಿಯೂ ಎಲ್ಲ ಶೈಕ್ಷಣಿಕ

ಯೋಜನೆಗಳಿಗೆ ಆರ್ಥಿಕ ನಿಹಿತಾರ್ಥಗಳಿರುತ್ತವೆ ಹಾಗೂ ಯೋಜನೆಗಳ ಅನುಷ್ಠಾನಕ್ಕೆ ಸ್ವಲ್ಪ ಮಟ್ಟದ ಬಂಡವಾಳದ ಅಗತ್ಯವಿದ್ದೇ ಇರುತ್ತದೆ. ಆದರೆ, ಆರ್ಥಿಕ ನಿಹಿತಾರ್ಥಗಳಿರುವ ಶಿಕ್ಷಣ ಯೋಜನೆಗೂ, ಮೂಲಭೂತವಾಗಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಪ್ರಸ್ತಾವ ಮಾಡುವ ಆರ್ಥಿಕ ಯೋಜನೆಗೂ ಅಜಗಜಾಂತರ ವ್ಯತ್ಯಾಸವಿದೆ. ಬದುಕಿಗಾಗಿ ಆಹಾರ ಸೇವನೆ ಹಾಗೂ ಆಹಾರ ಸೇವನೆಗಾಗಿ ಬದುಕು ಎನ್ನುವಂತಹ ವ್ಯಾಪಕ ಮತ್ತು ಮೂಲಭೂತ ವ್ಯತ್ಯಾಸವಿದು. ಈ ಮುಖ್ಯ ವ್ಯತ್ಯಾಸ ನಮಗೆ ಮನವರಿಕೆಯಾಗಿಲ್ಲ. ಹಾಗಾಗಿ, ನಮ್ಮ ಎಲ್ಲ ಯೋಜನೆಗಳಲ್ಲಿ ಅಸಾಧಾರಣ ವೆಚ್ಚ-ನಿಲವು ಕಂಡುಬರುತ್ತದೆ. ಯೋಜನೆಯ ವಿಷಯಕ್ಕಿಂತಲೂ ಅದಕ್ಕೆ ತಗಲುವ ಖರ್ಚುವೆಚ್ಚ ಮಹತ್ತ್ವದ ಅಂಶವೆಂದು ನಾವು ಭಾವಿಸುತ್ತಿದ್ದೇವೆ ಹಾಗೂ ಈ ವಿಷಯವೇ ನಮ್ಮ ಯೋಚನಾ ಲಹರಿಯಲ್ಲಿ ವ್ಯಾಪಕವಾಗಿ ಹರಡಿದೆ.

ಶೈಕ್ಷಣಿಕ ಅಭಿವೃದ್ಧಿಗೆ ಹಣದ ಅಗತ್ಯವಿರುವುದು ನಿಜವಾದರೂ, ಬರೀ ಹಣ ವ್ಯಯ ಮಾಡುವುದರಿಂದ ಅಭಿವೃದ್ಧಿ ಸಾಧ್ಯವಿಲ್ಲವೆನ್ನುವುದನ್ನು ನೆನಪಿಡಬೇಕಿರುವುದು ಅತ್ಯಾವಶ್ಯಕ. ಹಣಕ್ಕೆ ಹೆಚ್ಚಿನ ಮಹತ್ತ್ವ ನೀಡುವುದರಿಂದ, ಹಣವು ವ್ಯರ್ಥವಾಗಿ ಪೋಲಾಗುತ್ತದೆ. ದುರದೃಷ್ಟವಶಾತ್, ಚಿಂತಿಸುವುದಕ್ಕಿಂತ ಹಣ ವ್ಯಯಿಸುವುದು ಅದರಲ್ಲಿಯೂ ಇತರರ ಹಣವನ್ನು ವ್ಯಯಿಸುವುದು ನಾವು ಭಾವಿಸುವುದಕ್ಕಿಂತ ಹೆಚ್ಚು ಸುಲಭ. ಆದರೆ ಚಿಂತನೆಯ ವಿನಾ ಯೋಗ್ಯ ಫಲಿತಾಂಶ ದೊರಕುವುದು ಸಾಧ್ಯವೇ ಇಲ್ಲ. ಭಾರತವೊಂದು ಬಡದೇಶ ಹಾಗೂ ಶಿಕ್ಷಣದ ಸಲುವಾಗಿ ಮಹತ್ತರ ಬೃಹತ್ ಪ್ರಮಾಣದ ಬಂಡವಾಳ ಹೂಡುವ ಸಾಮರ್ಥ್ಯ ನಮಗಿಲ್ಲ. ಈ ಹಿಂದೆ ತೋರಿಸಿದಂತೆ ಶೈಕ್ಷಣಿಕ ವೆಚ್ಚದ ಸಮತಲವನ್ನು ನಾವು ತಲಪಿದ್ದೇವೆ. ಶೈಕ್ಷಣಿಕ ಪುನರ್‌ನಿರ್ಮಾಣಕ್ಕೆ ಹೆಚ್ಚುವರಿ ಧನಸಹಾಯ ಸಿಗುವುದು ಬಹಳ ಕಷ್ಟ. ಆದ್ದರಿಂದ ಹಣಕ್ಕೆ ನೀಡಿರುವ ಪ್ರಾಧಾನ್ಯವನ್ನು ಕಡಮೆ ಮಾಡಿ, ಸಮರ್ಪಕ ಯೋಜನೆ ಮತ್ತು ಇದಕ್ಕಾಗಿಯೇ ಮುಡಿಪಿಟ್ಟ ಮಾನವ ಪ್ರಯತ್ನದ ಮೇಲೆ ಗಮನ ಕೇಂದ್ರೀಕರಿಸುವುದು ಬಹಳ ಮುಖ್ಯ. ಶೈಕ್ಷಣಿಕ ಪ್ರಗತಿಗೆ ಆರ್ಥಿಕವಲ್ಲದ ಈ ಅಗತ್ಯಗಳನ್ನು ಯಾವ ದೇಶವೂ ಕಡೆಗಣಿಸಲಾಗುವುದಿಲ್ಲ, ಅದರಲ್ಲೂ ಅಭಿವೃದ್ಧಿಯ ಹಾದಿಯಲ್ಲಿರುವ ನಮ್ಮ ದೇಶದಂತಹ ಬಡದೇಶವಂತೂ ಇದನ್ನು ಕಡೆಗಣಿಸಲಾಗುವುದೇ ಇಲ್ಲ.

**(ಉ) ಅಪೇಕ್ಷೆ: ಸ್ವದೇಶಿ ಚಳವಳಿ:** ಕೊನೆಯದಾಗಿ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶೈಕ್ಷಣಿಕ ಪುನರ್‌ನಿರ್ಮಾಣದ ವೈಫಲ್ಯದ ಕಾರಣವೇನೆಂದರೆ ನಮ್ಮ ಚಿಂತನೆ ಮತ್ತು ಕಾರ್ಯಕ್ರಮಗಳಿಗೆ ನಾವು ವಿದೇಶಿ ಪರಿಣತರನ್ನು ಅತೀ ಹೆಚ್ಚಾಗಿ ಅವಲಂಬಿಸಿದ್ದೇವೆ. 1947 ಕ್ಕೆ ಮುಂಚೆ, ನಾವು ಇಂಗ್ಲೆಂಡಿನ ಮೇಲೆ ಅತಿ ಹೆಚ್ಚು ಅವಲಂಬಿತರಾಗಿದ್ದೆವು ಮತ್ತು ಬ್ರಿಟಿಷ್ ಅನುಭವಗಳ ಆಧಾರದ ಮೇಲೆ ನಮ್ಮ ಆದ್ಯತೆಗಳನ್ನು ಗುರುತಿಸಿಕೊಳ್ಳುತ್ತಿದ್ದೆವು. ಸ್ವಾತಂತ್ರ್ಯ ದೊರೆತ ಅನಂತರ ಸ್ವಲ್ಪ ಮಟ್ಟಿಗೆ ಇಂಗ್ಲೆಂಡಿನ ಮೇಲೆ ನಮ್ಮ ಅವಲಂಬನೆ ಕಡಮೆಯಾಗಿದೆ. ಆದರೆ ಅವಲಂಬನೆಯ ಮನೋಭಾವವಿನ್ನೂ ಮುಂದುವರಿಯುತ್ತಿದೆ. ನಮ್ಮ ಚಿಂತನೆಯನ್ನು ಪ್ರಭಾವಿಸಲು ನಾವು ಯುಎಸ್ ಅಥವಾ ಯುಎಸ್‌ಎಸ್‌ಆರ್ ಕಡೆ ನೋಡುತ್ತಿದ್ದೇವೆ. ಯಾವುದೇ ದೇಶವಾದರೂ ಅಥವಾ ಯಾವ ಕಾರಣಗಳಿಗಾಗಿಯಾದರೂ ಸರಿ, ಬೌದ್ಧಿಕ ಅವಲಂಬನೆಯ ಫಲಿತಾಂಶ ವಿಪತ್ತೇ ಆಗಿರುತ್ತದೆ, ಇಲ್ಲಿ ಸಹ ಅದೇ ಕಂಡುಬರುತ್ತಿದೆ.

ಸಾಮಾಜಿಕ ಸಂರಚನೆಗಾಗಲೀ ಅಥವಾ ಶೈಕ್ಷಣಿಕ ಅಭಿವೃದ್ಧಿಗಾಗಲೀ, ವಿದೇಶಿ ಮಾದರಿಗಳನ್ನು ಅವಲಂಬಿಸುವುದು ಸರಿಯೇ ಎನ್ನುವುದನ್ನು ಪರಿಗಣಿಸಬೇಕಾದ ಸಮಯ ಬಂದಿದೆ. ಮಹಾತ್ಮ ಗಾಂಧಿಯವರು ಭಾರತದಲ್ಲಿ ನಾವು ಸೃಷ್ಟಿಸಬೇಕಾದ ಸಮಾಜವನ್ನು ಕುರಿತು ಆಳವಾಗಿ ಚಿಂತನೆ ನಡೆಸಿದ್ದರು. ಆದರೆ ಅವರು ಹಾಕಿಕೊಟ್ಟ ಶ್ರೇಷ್ಠ ಮಾರ್ಗದಲ್ಲಿ ನಾವು ನಡೆಯುತ್ತಿಲ್ಲ. ಅತ್ಯಂತ ಉದ್ಯಮೀಕರಣಗೊಂಡಿರುವ ಕೊಳ್ಳುಬಾಕ ಪಾಶ್ಚಿಮಾತ್ಯ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸದೇ, ನಮ್ಮ ಮಾದರಿಗಳೆಂದು ಅಂಗೀಕರಿಸಿದ್ದೇವೆ. ಅದೇ ರೀತಿ ಪಾಶ್ಚಿಮಾತ್ಯ ಶೈಕ್ಷಣಿಕ ವ್ಯವಸ್ಥೆಗಳನ್ನು ನಮ್ಮ ಧ್ಯೇಯವಾಗಿ ಸ್ವೀಕರಿಸಿದ್ದೇವೆ. ಪಾಶ್ಚಿಮಾತ್ಯ ಸಮಾಜಗಳು ಮತ್ತು ಅವುಗಳ ಶೈಕ್ಷಣಿಕ ವ್ಯವಸ್ಥೆಯ ಯೋಚನಾರಹಿತ ಅನುಕರಣೆಯೇ ನಮ್ಮ ವೈಫಲ್ಯಕ್ಕೆ ಕಾರಣವಾಗಿದೆ. ಏಕೆಂದರೆ ಈ ಸಮಾಜಗಳ ಸ್ವರೂಪ ಅಥವಾ ಅವರ ಶಿಕ್ಷಣ ಪದ್ಧತಿ ನಮಗೆ ಹೊಂದುವುದಿಲ್ಲ. ಆದ್ದರಿಂದ ಈಗ ನಮಗೆ ತುರ್ತಾಗಿ ಅಗತ್ಯವಿರುವುದು ಸ್ವದೇಶೀ ಚಳವಳಿ. ನಾವು ನಮಗಾಗಿ ರೂಪಿಸಿಕೊಳ್ಳುವ ಸಮಾಜವನ್ನು ಕಲ್ಪಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನದ ಅಗತ್ಯವಿದೆ. ಹಿಂದಿನಿಂದಲೂ ನಮ್ಮ ಭವ್ಯ ಭಾರತದ ನಿಲುವು ಸೂಚಿಸಿರುವ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ಮೇಳೈಸುವಂತಹ ಸಮಾಜದ ನಿರ್ಮಾಣವಾಗಬೇಕು. ಇದಕ್ಕೆ ನಮಗೆ ಅಗತ್ಯವಿರುವ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಸ್ವಂತವಾಗಿ ನಾವು ಚಿಂತಿಸಬೇಕು. ಪ್ರಾಮಾಣಿಕವಾಗಿ ಮತ್ತು ಸತತವಾಗಿ ಈ ಎರಡೂ ಪ್ರಯತ್ನಗಳಾದರೆ, ನಮ್ಮ ಇಪ್ಪತ್ತೈದು ವರ್ಷಗಳ ವೈಫಲ್ಯ ಭೂತಕಾಲದಲ್ಲಿ ವಿಲೀನವಾಗುತ್ತದೆ ಹಾಗೂ ಈ ಶತಮಾನದ ಕೊನೆಗೊಳ್ಳುವುದಕ್ಕೂ ಮೊದಲು

ನಮ್ಮ ಕನಸಿನ ಭಾರತದ ನಿರ್ಮಾಣ ಸಾಧ್ಯವಾಗುತ್ತದೆ. ಆ ಭಾರತವು ಸಂವಿಧಾನದ ಪೀಠಿಕೆಯಲ್ಲಿ ಸ್ಥಾಪಿತವಾಗಿರುವ ಉದಾತ್ತ ಸಿದ್ಧಾಂತಗಳನ್ನು ಪ್ರತಿಫಲಿಸುತ್ತದೆ ಹಾಗೂ ತನ್ನ ಅಗತ್ಯ ಮತ್ತು ಸಾಧ್ಯತೆಗಳಿಗೆ ಸೂಕ್ತವಾಗಿರುವ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರುತ್ತದೆ.